ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಶಹಬಾದ

**CC No: 128/2019**

CW : 4 PW: 2

| | | |
|---|---|---|
| ಹೆಸರು | : | ಭಗವಂತ್ರಾಯ |
| ತಂದೆಯ ಹೆಸರು | : | ಗುಂಡಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ಸ್ಥಳ | : | ಜೇವರ್ಗಿ |

(ದಿನಾಂಕ: **31-03-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)

ಮುಖ್ಯ ವಿಚಾರಣೆ: ಸ.ಸ.ಅ ರವರಿಂದಃ

ನನಗೆ ಆರೋಪಿತರ ಪರಿಚಯ ಇರುತ್ತದೆ. ಚಾಸಾ-1, 5 ರಿಂದ 7 ರವರ ಪರಿಚಯ ಇರುತ್ತದೆ. ದಿ: 05/10/2010 ರಂದು ಚಾಸಾ-1 ರವರ ಮದುವೆ ಮರತೂರು ಅಣವೀರಭದ್ರೇಶ್ವರ ದೇವಸ್ಥಾನದಲ್ಲಿ ಇದ್ದು ನಾನು ಹೋಗಿರುತ್ತೇನೆ. ನಾಲ್ಕೈದು ತಿಂಗಳು ಸರಿಯಾಗಿ ಇದ್ದು ನಂತರ ಕಿರಿಕಿರಿ ಶುರುವಾಗಿರುತ್ತದೆ. ದಿ: 02/04/2018 ರಂದು ಸಿಂಚನ ಇವಳು ತವರು ಮನೆಗೆ ಬಂದಿರುತ್ತಾಳೆ. ಆಗ ನಾವು ಪಂಚಾಯತಿ ಮಾಡಿ ತಿಳಿ ಹೇಳಿರುತ್ತೇವೆ. ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ಮುಂದೆ ಅವರಲ್ಲಿ ಸಂಸಾರ ನಡೆಯದೇ ಇರುವ ಕಾರಣ ಅವಳು ತವರು ಮನೆಗೆ ಬಂದಿರುತ್ತಾಳೆ. ನಂತರ ಪ್ರಕರಣ ದಾಖಲಿಸಿದ್ದು ಇರುತ್ತದೆ. ಫಿರ್ಯಾದನ್ನು ಚಾಸಾ-1 ರವರು ನೀಡಿರುತ್ತಾರೆ. ಮದುವೆಯ ಕಾಲಕ್ಕೆ ವರನಿಗೆ ರೂ.100000/- ಗಳ ಸಾಮಾನುಗಳು, ಆರು ತೊಲೆ ಬಂಗಾರ ಹಾಗೂ ರೂ.60,000/-ಗಳು ನಗದು ಹಣ ಕೊಟ್ಟಿದ್ದು ಇರುತ್ತದೆ. ನಾನು ಈ ಕುರಿತು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಚಾಸಾ-1 ರವರಿಗೆ ಅವಳ ಗಂಡ ಹಾಗೂ ಅವರ ಮನೆಯವರು ಕಿರಿಕಿರಿ ಮಾಡಿದ್ದು ಇರುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಇಷ್ಟನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ.

(ಈ ಹಂತದಲ್ಲಿ ಸ.ಸ. ಅಭಿಯೋಜಕರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲಾಯಿತು)

ಪಾಟೀ ಸವಾಲು: ಸ.ಸ. ಅಭೀಯೋಜಕರಿಂದ

ಚಾಸಾ-1 ರವರ ನಾದಿನಿಯರಾದ ಆರೋಪಿ ನಂ.3 ಮತ್ತು 4 ರವರು ಅಡುಗೆ ಮಾಡಲು ಬರುವುದಿಲ್ಲ ಅಂತ ಮತ್ತು ಆರೋಪಿ ನಂ.2 ಮತ್ತು 5 ರವರು 4 ತೊಲೆ ಬಂಗಾರ ತರುವಂತೆ ಹೇಳಿ ತೊಂದರೆ ಕೊಡುತ್ತಿದ್ದು ಅವರ ಮಾತು ಕೇಳಿ ಚಾಸಾ-1 ರವರ ಗಂಡ ಆರೋಪಿ ನಂ.1 ಇವರು ಚಾಸಾ-1 ರವರಿಗೆ ಮಾನಸಿಕ ಮತ್ತು ದೈಹಿಕ ಕಿರುಕುಳ ಕೊಟ್ಟು ಹೊಡೆಯುತ್ತಿದ್ದನು ಅಂತ ಗೊತ್ತಾಗಿ ನಾನು, ಚಾಸಾ-5, 6 ಎಲ್ಲರೂ ಕೂಡಿ ಮರತೂರು ಗ್ರಾಮಕ್ಕೆ ಹೋಗಿ ಚಾಸಾ-1

ರವರನ್ನು ಸರಿಯಾಗಿ ನೋಡಿಕೊಳ್ಳುವಂತೆ ಪಂಚಾಯತಿ ಮಾಡಿ ಬಂದಿರುತ್ತೇವೆ ಎಂದರೆ ಸರಿ. ಚಾಸಾ-1 ರವರಿಗೆ ಆರೋಪಿತರು ಸರಿಯಾಗಿ ನೋಡಿಕೊಳ್ಳದೇ ಇದ್ದಿದ್ದರಿಂದ ಕೌಟುಂಬಿಕ ನ್ಯಾಯಾಲಯ ಕಲಬುರಗಿಯಲ್ಲಿ ದಾವೆ ಹೂಡಿದ್ದರಿಂದ ನ್ಯಾಯಾಧೀಶರ ಮುಂದೆ ಆರೋಪಿ ನಂ.1 ರವರು ಚಾಸಾ-1 ಇವಳಿಗೆ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿ. ನಂತರ ಅವಳಿಗೆ ಆರೋಪಿತರು ಮಾನಸಿಕ ದೈಹಿಕ ಕಿರುಕುಳ ನೀಡಿದ್ದರಿಂದ ಅವಳು ಬೆಸತ್ತು ತವರು ಮನೆಗೆ ಬಂದಿರುತ್ತಾಳೆ ಎಂದರೆ ಸರಿ. ದಿ: 26/01/2019 ರಂದು ಬೆಳಿಗ್ಗೆ 9 ಗಂಟೆಗೆ ಚಾಸಾ-1 ಮತ್ತು 6 ರವರು ಮರತೂರು ಗ್ರಾಮಕ್ಕೆ ಹೋಗಿ ಆರೋಪಿ ನಂ.1 ಇತನು ಎರಡನೇ ಮದುವೆ ಆಗಿರುವ ಬಗ್ಗೆ ಆರೋಪಿ ನಂ.1 ರವರಿಗೆ ವಿಚಾರಿಸಿದಾಗ ಚಾಸಾ-1 ರವರನ್ನು ಅವಾಚ್ಯ ಶಬ್ಧಗಳಿಂದ ಬೈದು ಏನು ಮಾಡಕೋತಿ ಮಾಡಕೋ ನಾ ಮನಸ್ಸು ಮಾಡಿದರೆ 10 ಮದುವೆ ಆಗುತ್ತೇನೆ ಅಂತ ದಬ್ಬಿಸಿಕೊಂಡು ಹೋಗಿರುತ್ತಾನೆ ಎಂದರೆ ಸರಿ.

<u>ಪಾಟೀ ಸವಾಲು: ಶ್ರೀ ಬಿ.ಎಸ್.ಎಮ್. ಆರೋಪಿ ಪರ ವಕೀಲರಿಂದಃ</u>

ಚಾಸಾ-1 ಹಾಗೂ ಅವಳ ತಾಯಿ ನನಗೆ ಹುಟ್ಟಿನಿಂದಲೂ ಪರಿಚಯಸ್ಥರು. ಚಾಸಾ-1 ಮತ್ತು ಅವಳ ತಾಯಿ ನನ್ನ ಸಂಬಂಧಿಕರು ಇದ್ದರೂ ಸಹ ಪರಿಚಯಸ್ಥರು ಅಂತ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮದುವೆಯ ಕಾಲಕ್ಕೆ ವರನಿಗೆ ರೂ.100000/- ಗಳ ಸಾಮಾನುಗಳು, ಆರು ತೊಲೆ ಬಂಗಾರ ಹಾಗೂ ರೂ.60,000/-ಗಳು ನಗದು ಹಣ ಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ನನ್ನ ಕೈಯಾರೆ ನನ್ನ ಎದುರಿನಲ್ಲಿ ಕೊಟ್ಟಿರುವುದಾಗಿ ಹೇಳುತ್ತಾರೆ. ಹಣ ಕೊಡುವುದು ತೊಗುವುದು ದೇವಸ್ಥಾನದಲ್ಲಿಯೇ ಆಗಿರುತ್ತದೆ. ಚಾಸಾ-1 ಮತ್ತು ಆರೋಪಿ ನಂ.1 ರವರ ಮದುವೆಯಾಗಿ ಈಗ ಅಂದಾಜು 12 ರಿಂದ 13 ವರ್ಷಗಳು ಆಗಿರುತ್ತವೆ. ಚಾಸಾ-1 ರವರಿಗೆ ಮದುವೆಯಾದ ನಾಲ್ಕು ತಿಂಗಳಿನಲ್ಲಿಯೇ ಮಾನಸಿಕ ಹಾಗೂ ದೈಹಿಕ ಕಿರುಕುಳ ಕೊಟ್ಟಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಂಗತಿಯನ್ನು ನನಗೆ ಚಾಸಾ-1 ಮತ್ತು ಅವಳ ತಾಯಿ ಹೇಳಿರುತ್ತಾರೆ. ಆಗಲೇ ಯಾಕೆ ಫಿರ್ಯಾದಿ ಸಲ್ಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಹಿರಿಯರಲ್ಲಿ ಮಾತು ಕತೆ ಆಗುವುದು ಇರುತ್ತದೆ ಎಂದು ಹೇಳುತ್ತಾರೆ. ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ-1 ಮತ್ತು ಅವಳ ತಾಯಿ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನಂ.1 ಜೆಸ್ಕಾಂ ಕಂಪನಿಯಲ್ಲಿ ಕ್ಯಾಷಿಯರ್ ಅಂತ ಕೆಲಸ ಮಾಡುತ್ತಾರೆ ಎಂದರೆ

ಸರಿ. ಆತನಿಗೆ ರೂ.1,50,000/- ಪ್ರತಿ ತಿಂಗಳಿಗೆ ಸಂಬಳ ಇರುತ್ತದೆ ಎಂದರೆ ಸರಿ. ಆರೋಪಿ ನಂ.1 ರವರಿಂದ ಹಣವನ್ನು ಕೀಳುವ ಉದ್ದೇಶ ಸಲುವಾಗಿ ಚಾಸಾ-1 ಮತ್ತು 6 ರವರಿಂದ ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.3 ಮತ್ತು 4 ರವರ ಮದುವೆ ಆರೋಪಿ ನಂ.1 ರವರ ಮದುವೆಗಿಂತ ಮೊದಲು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿ ನಂ.3 ಮತ್ತು 4 ರವರು ಮದುವೆಯಾದಾಗಿನಿಂದ ಗಂಡನ ಮನೆಯಲ್ಲಿ ಇರುವುದರಿಂದ ಸದರಿ ಪ್ರಕರಣಕ್ಕೂ ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಫಿರ್ಯಾದಿಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ ಆದರೆ ಅದನ್ನು ನಾನು ನೋಡಿರುತ್ತೇನೆ. ನಾನು, ಚಾಸಾ-5 ಮತ್ತು 6 ರವರು ಆರೋಪಿತರೊಂದಿಗೆ ಪಂಚಾಯತಿ ಮಾಡಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು, ಚಾಸಾ-6 ಮತ್ತು 7 ರವರ ಜೊತೆಗೆ ನನ್ನ ಮಾವ ಶಾಂತಪ್ಪ ಖಣದಾಳರವರು ಇದ್ದರು. ನನಗೆ ಹಾಗೂ ಚಾಸಾ-6 ರವರ ಮನೆಯ ನಡುವೆ 32 ಕಿ.ಮೀ ಅಂತರ ಇರುತ್ತದೆ. ಸದರಿ ಸಂಗತಿಯು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಫೋನ್ ಮುಖಾಂತರ ತಿಳಿಸಿದ ನಂತರ ಹೋಗಿ ಕೇಳಿ ಗೊತ್ತಾದ ಬಗ್ಗೆ ನುಡಿಯುತ್ತಾರೆ. ಆರೋಪಿ ನಂ.1 ರವರಿಗೆ ಸಾಕಷ್ಟು ಸಂಬಳ ಇರುವ ಕಾರಣ ಚಾಸಾ-1 ರವರಿಂದ ಹಣ ತೆಗೆದುಕೊಂಡು ಬರುವಂತೆ ಹೇಳಿರುವುದಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿ ನಂ.1 ರವರು ಎರಡನೇ ಮದುವೆ ಮಾಡಿಕೊಂಡಿರುತ್ತಾರೆ ಅಂತ ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿತನೇ 10 ಮದುವೆ ಮಾಡಿಕೊಳ್ಳುತ್ತಾನೆ ಅಂತ ಹೇಳಿದ ಬಗ್ಗೆ ನುಡಿಯುತ್ತಾರೆ. ನಾನು ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ರವರಿಂದ ಹಣ ಕೀಳುವ ಉದ್ದೇಶಕ್ಕಾಗಿ ಚಾಸಾ-1 ರವರಿಂದ ಖೊಟ್ಟಿ ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ. ಸರಿ ಇದೆ.

**Sd/-**
ಸಿವಿಲ್ ನ್ಯಾಯಾಧೀಶರು, ಶಹಬಾದ.